# ಪತ್ರಿಕಾ ಪ್ರಕಟಣೆ

ಅಂಕಿಅಂಶಗಳ ವಿಶ್ಲೇಷಣೆಯ ಆಧಾರದ ಮೇಲೆ ಪ್ರಮುಖ ತೆರಿಗೆ ವಂಚನೆ ಪತ್ತೆಹಚ್ಚುವ ಕಾರ್ಯದ ಭಾಗವಾಗಿ, ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017 ರ ಅಡಿಯಲ್ಲಿ ನೋಂದಾಯಿತ ವರ್ತಕರಾಗಿರುವ ಹಾಗೂ ಇಂಟರ್ನೆಟ್ ಸೇವೆಗಳು ಮತ್ತು ಟೆಲಿ ಕಮ್ಯೂನಿಕೇಷನ್ ಸೇವೆಗಳ ವ್ಯವಹಾರದಲ್ಲಿ ತೊಡಗಿರುವ ಮೆ: ರಿಲಯನ್ಸ್ ಕಮ್ಯುನಿಕೇಷನ್ಸ್ ಲಿಮಿಟೆಡ್ ಮತ್ತು ಮೆ: ರಿಲಿಯನ್ಸ್ ಐಡಿಸಿ ಲಿಮಿಟೆಡ್ ಇವರು ತೆರಿಗೆ ಹಾಗೂ ಬಡ್ಡಿಯೂ ಸೇರಿದಂತೆ 37 ಕೋಟಿ ರೂಪಾಯಿಗಳನ್ನು ಪಾವತಿಸದಿರುವುದನ್ನು ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆಯು ಪತ್ತೆ ಹಚ್ಚಿರುತ್ತದೆ. ಸದರಿಯವರು ಈದಿನದವರೆಗಿನ ತೆರಿಗೆ ಹಾಗೂ ಬಡ್ಡಿಯೂ ಸೇರಿದಂತೆ 37 ಕೋಟಿ ರೂಪಾಯಿಗಳನ್ನು ಪಾವತಿಸಿರುವುದಿಲ್ಲ. ಸದರಿಯವರು ಜುಲೈ 2017 ರಿಂದ ಮೇ 2018 ರವರೆಗಿನ ಅವಧಿಯ ಮಾಸಿಕ ರಿಟರ್ನ್‌ಗಳನ್ನೂ ಸಹ ಸಲ್ಲಿಸಿರುವುದಿಲ್ಲ ಹಾಗೂ ಸರ್ಕಾರಕ್ಕೆ ಕಾನೂನಾತ್ಮಕವಾಗಿ ಬರಬೇಕಾದ ಬಾಕಿ ತೆರಿಗೆ ಮೊತ್ತವನ್ನು ಪಾವತಿಸಿರುವುದಿಲ್ಲ.

ಈ ಪ್ರಕರಣಗಳನ್ನು ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯ ದಕ್ಷಿಣ ವಲಯ ಜಾರಿ ವಿಭಾಗದ ಅಧಿಕಾರಿಗಳು ದಿನಾಂಕ: 20.06.2018 ರಂದು ತಪಾಸಣೆ ಕೈಗೊಂಡಿರುತ್ತಾರೆ. ಈ ವರ್ತಕರು ತೆರಿಗೆ ಹಾಗೂ ಬಡ್ಡಿಯನ್ನು ಪಾವತಿಸದಿರುವುದನ್ನು ಒಪ್ಪಿಕೊಂಡು, 15.05 ಕೋಟಿ ರೂಪಾಯಿಗಳನ್ನು ದಿನಾಂಕ: 21.06.2018 ರಂದು ಪಾವತಿಸಿರುತ್ತಾರೆ ಹಾಗೂ ಬಾಕಿ ಮೊತ್ತವನ್ನು ಪಾವತಿಸಲು ಒಪ್ಪಿರುತ್ತಾರೆ. ಬಾಕಿ ಮೊತ್ತವನ್ನು ಪಾವತಿಸದೇ ಇದ್ದಲ್ಲಿ ಇಲಾಖೆಯು ಸರಕು ಮತ್ತು ಸೇವಾ ತೆರಿಗೆಯ ಕಾನೂನಿನ ಅನ್ವಯ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತದೆ.

ಬೇರೆ ಅಂಶಗಳೂ ಸಹ ತನಿಖೆಗೊಳಪಡುತ್ತಿದ್ದು, ಪಾವತಿಸಬೇಕಾದ ಒಟ್ಟು ಜಿಎಸ್‌ಟಿ ತೆರಿಗೆ ಮತ್ತು ಬಡ್ಡಿಯ ಮೊತ್ತವು ಅಂತಿಮವಾಗಿ ತನಿಖೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಗೊತ್ತಾಗಲಿದೆ. ತನಿಖಾ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

(ಎಂ.ಎಸ್. ಶ್ರೀಕರ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು